**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**ಸಿ.ಸಿ ಃ 1/2022**

**ಸಾಕ್ಷಿದಾರರ ಹೆಸರು ಃ ಶಾಮಪ್ಪ ಬಾಳಪ್ಪ ಪಾತ್ರೋಟ್**

**ಸಿ.ಡಬ್ಲ್ಯೂ - 06**

**ತಂದೆಯ ಹೆಸರು ಃ ಬಾಲಪ್ಪ**

**ಪಿ.ಡಬ್ಲ್ಯೂ - 05**

**ವಯಸ್ಸು ಃ 43 ವರ್ಷ**

**ಉದ್ಯೋಗ ಃ ಗ್ರಾಮ ಲೆಕ್ಕಾಧಿಕಾರಿ**

**ವಾಸಸ್ಥಳ ಃ ಬೆಳಗಾವಿ**

**ದಿನಾಂಕಃ 27.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>**

ದಿಃ 16/05/2016 ರಿಂದ 16/07/2019 ರವರೆಗೆ ಕೆರೆಕಟ್ಟೆ ಗ್ರಾಮ ಪಂಚಾಯಿತಿಯಾಗಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಶೃಂಗೇರಿ ವಿದ್ಯಾರಣ್ಯಪುರಕ್ಕೆ ಕೆಲವು ದಿನಗಳ ಕಾಲ ಕಾರ್ಯ ನಿರ್ವಹಿಸಿರುತ್ತೇನೆ. ಚಾಸಾ 1, 4, 6 ಮತ್ತು 7 ನನಗೆ ಗೊತ್ತು. ದಿಃ 21/12/2018 ರಂದು ಚಾಸಾ 4 ರವರ ಸೂಚನೆ ಮೇರೆಗೆ ಸರ್ವೇ ನಂಬರ್ 234/1 ರಿಂದ 4 ಹಾಗೂ ಸರ್ವೇ ನಂಬರ್ 215 ಜಮೀನಿಗಳಿಗೆ ಭೇಟಿ ನೀಡಿದ್ದು, ಸ್ಥಳದಲ್ಲಿ ಚಾಸಾ 4, 7, 5 ಹಾಗೂ ಇನ್ನು ಬೇರೆ ಕಚೇರಿಯ ಅಧಿಕಾರಿಗಳು ಹಾಜರಿದ್ದು, ಚಾಸಾ 5 ರವರು ಸ್ಥಳ ಅಳತೆ ಮಾಡಿ ಕಚ್ಚಾ ನಕಾಶೆ ತಯಾರಿಸಿರುತ್ತಾರೆ. ನಾನು ಪಕ್ಕಾ ನಕಾಶೆಗೆ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಈ ಸಂಬಂಧ ಪೋಲಿಸರು ನನ್ನನ್ನು ವಿಚಾರಿಸಿದ್ದು, ನಾನು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಐ ಎಸ್ ಟಿ ವಕೀಲರಿಂದ ಃ</u>**

ನಾನು ಸ್ಥಳದಲ್ಲಿ ನಕಾಶೆ ತಯಾರಿಸಿದ್ದು ಸದರಿ ನಕಾಶೆಗೆ ಸಹಿ ಮಾಡಿರುತ್ತೇನೆಂದು ಹೇಳಿಕೆ ನೀಡಿರುತ್ತೇನೆ. ನಾನು ಸ್ಥಳದಲ್ಲಿ ಹಾಜರಿರುವ ಸಂಬಂಧ ನಾನು ಯಾವುದೇ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 27.06.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**